

ಶಿರಹಟ್ಟಿ ವ್ಯಾಪ್ತಿಯಲ್ಲಿ ಆವೃತ್ತವಾಗಿರುವ ಕಪ್ಪತಗುಡ್ಡದಲ್ಲಿ ಕಂಡ ತೋಳ

ಸಂರಕ್ಷಣೆ ಜತೆಗೆ ಸಂವರ್ಧನೆ, ಸಂಶೋಧನೆ ಆಗಬೇಕಿದೆ' ಎನ್ನುತ್ತಾರೆ ನಂದಿವೇರಿ ಮಠದ ಶಿವಕುಮಾರ ಸ್ವಾಮೀಜಿ.

'ರಾಜ್ಯದ ಇನ್ನಿತರ ಗುಡ್ಡಗಳ ಪರಿಸ್ಥಿತಿ ಒಂದು ರೀತಿಯಾದರೆ, ಕಪ್ಪತಗುಡ್ಡದ ಪರಿಸ್ಥಿತಿ ಬೇರೆಯದ್ದಾಗಿದೆ. ಕಪ್ಪತಗುಡ್ಡದ ಕಾರಣದಿಂದಲೇ ಜಿಲ್ಲೆಯ ಸುತ್ತಮುತ್ತಲಿನ ಜನರಿಗೆ ಶುದ್ಧ ಗಾಳಿ ಸಿಗುತ್ತಿದೆ. ಹವಾಮಾನ ಇಲಾಖೆ ಪ್ರಕಟಿಸುವ ಅನುಸೂಚಿಯಲ್ಲಿ ಗದಗ ಜಿಲ್ಲೆ ಶುದ್ಧ ಹವೆಯಲ್ಲಿ ರಾಷ್ಟ್ರಮಟ್ಟದಲ್ಲಿ ಪ್ರಥಮ ಸ್ಥಾನ ಪಡೆಯುತ್ತಿದೆ. ಹಾಗಾಗಿ, ಕಪ್ಪತಗುಡ್ಡ ಭವಿಷ್ಯದ ಆಸ್ತಿ. ಅದನ್ನು ಉಳಿಸಿ ಬೆಳೆಸುವುದು ಎಲ್ಲರ ಕರ್ತವ್ಯ ಆಗಬೇಕು. ಇಲ್ಲಿ ಸಂರಕ್ಷಣೆ, ಸಂಶೋಧನೆಯಂತಹ ಶೈಕ್ಷಣಿಕ ಚಟುವಟಿಕೆಗಳು ಹೆಚ್ಚಬೇಕು. ಆಗಷ್ಟೇ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಬೀಳುತ್ತವೆ. ಈ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತೀವ್ರ ಲಕ್ಷ್ಯ ವಹಿಸಬೇಕು' ಎಂಬುದು ಶ್ರೀಗಳ ಆಗ್ರಹವಾಗಿದೆ.

ನಗರ ಸಮೀಪದ ಗುಡ್ಡಗಳೆಲ್ಲವೂ ನಾಶ ಆಗುತ್ತಿವೆ. ಚಾಮುಂಡಿ ಬೆಟ್ಟವನ್ನು ಇಂದಿಗೂ ಅನೇಕರು ಗೆಬರುತ್ತಲೇ ಇದ್ದಾರೆ. ಅಲ್ಲಿ ಬೆಟ್ಟ ಕಡಿದು, ಸಮ ಮಾಡಿ, ನಿವೇಶನ ಮಾಡಿ ಮಾರಾಟ ಮಾಡಿಕೊಳ್ಳುತ್ತಿದ್ದಾರೆ. 30 ಕಿ.ಮೀ.ನಷ್ಟು ಉದ್ದಕ್ಕೆ ವ್ಯಾಪಿಸಿರುವುದರಿಂದ ಕಪ್ಪತಗುಡ್ಡಕ್ಕೆ ಆ ಪರಿಸ್ಥಿತಿ ಬಂದೊದಗಿಲ್ಲ. ಆದರೂ, ಕಪ್ಪತಗುಡ್ಡಕ್ಕೆ ಅಸುರಕ್ಷಿತ ಭಾವ ಇದ್ದೇ ಇದೆ. 'ಮೋಹ'ದ ಬಲೆಯಲ್ಲಿ ತೇಲುತ್ತಿರುವವರಲ್ಲಿ ಯಾರು ಏನು ಮಾಡುತ್ತಾರೋ? ಕಪ್ಪತಗುಡ್ಡದಲ್ಲಿರುವ ಕಲ್ಲು ಎತ್ತಿ, ಮಣ್ಣು ಅಗೆದು ಮಾರಾಟ ಮಾಡುತ್ತಾರೋ ಎಂಬ ಭೀತಿ ಇದ್ದೇ ಇದೆ. ಹಾಗಾಗಿ, ಕಪ್ಪತಗುಡ್ಡಕ್ಕೆ ಕಾವಲು ಬಿಗಿಯಾಗಬೇಕು; ಕಾಳಜಿ ಜಾಸ್ತಿ ಆಗಬೇಕಿದೆ.

ಪ್ರತಿಕ್ರಿಯಿಸಿ: **feedback@sudha.co.in**

## ಗಡಿ ಗುರುತಿಸುವ ಕೆಲಸವಾಗಲಿ...

2009ರಲ್ಲಿಯೇ ಬಲ್ಡೋಟಾ ಕಂಪನಿಯವರು ಚಿನ್ನದ ಗಣಿಗಾರಿಕೆ ನಡೆಸಲು ಹೊಂಚು ಹಾಕಿದ್ದರು. ವೈಯಕ್ತಿಕವಾಗಿ ನಾನು ಪ್ರತಿಭಟನೆ ಮಾಡಿದೆ. ತೋಂಟದಾರ್ಯ ಮಠದವರು ಬೆಂಬಲ ನೀಡಿದರು. ತೋಂಟದಾರ್ಯ ಮಠದ ಲಿಂಗೈಕ್ಯ ಸಿದ್ಧಲಿಂಗ ಶ್ರೀಗಳ ಆಶೀರ್ವಾದದಿಂದ ಕಪ್ಪತಗುಡ್ಡ ಚಿನ್ನದ ಗಣಿಗಾರಿಕೆಯಿಂದ ಉಳಿದುಕೊಂಡಿತು.

ವನ್ಯಜೀವಿಧಾಮದ 10 ಕಿ.ಮೀ. ವ್ಯಾಪ್ತಿಯಲ್ಲಿ ಯಾವುದೇ ಗಣಿಗಾರಿಕೆ ನಡೆಸದಂತೆ ಸುಪ್ರೀಂ ಕೋರ್ಟ್ ಆದೇಶ ಇದೆ. ಆದರೆ, ಕೆಲವು ರಾಜಕಾರಣಿಗಳು ಕಾಯ್ದೆ ಕಾನೂನುಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುವ ಹುನ್ನಾರ ನಡೆಸಿದ್ದಾರೆ. ಈಗ ಹೊಸ ಸರ್ಕಾರ ಬಂದಿದೆ, ಹೊಸ ಅಧಿಸೂಚನೆ ಹೊರಡಿಸಬೇಕು ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ.



ಗಡಿ ಗುರುತು ಮಾಡುವ ಸಂದರ್ಭ ಜನರ ಅಭಿಪ್ರಾಯ ಕೇಳಬೇಕು. ಗುಡ್ಡದ ಸುತ್ತಮುತ್ತ ಕೆಲವು ಹಳ್ಳಿಗಳು, ತಾಂಡಾಗಳು ಇವೆ. ಅವರು ಬದುಕುವುದು ಮುಖ್ಯ. ಜನರನ್ನು ಕಟ್ಟಿಕೊಂಡು ಒಮ್ಮತದ ನಿರ್ಣಯ ಮಾಡಬೇಕು. ಏಕಪಕ್ಷೀಯವಾಗಿ ನಿರ್ಣಯಿಸಲು ಸಾಧ್ಯವಿಲ್ಲ. ಹಾಗಂತ, ಎಲ್ಲವನ್ನೂ ದಾನ ಮಾಡಲೂ ಬರುವುದಿಲ್ಲ. ಸಂರಕ್ಷಿತ ಅರಣ್ಯ ಪ್ರದೇಶ ಎಂಬ ಘೋಷಣೆ ನಂತರ, ಯಾರಿಗೂ ಒಂದು ಗೇಣು ಜಾಗ ನೀಡಬಾರದು ಎಂಬ ಆದೇಶ ಆಗಿದೆ. ಜನರ ಅಭಿಪ್ರಾಯ ತೆಗೆದುಕೊಂಡು ಬೌಂಡರಿ ಫಿಕ್ಸ್ ಮಾಡಿದರೆ, ಕಪ್ಪತಗುಡ್ಡವನ್ನು ಉಳಿಸಿ, ಬೆಳೆಸಲು ಇನ್ನೂ ಹೆಚ್ಚಿನ ಅನುಕೂಲ ಆಗಲಿದೆ. ಹಿಂದಿನ ಸರ್ಕಾರದ ಸಮಯದಲ್ಲಿ 24 ಕಂಪನಿಗಳು ಗಣಿಗಾರಿಕೆಗೆ ಅವಕಾಶ ನೀಡುವಂತೆ ಅರ್ಜಿ ಸಲ್ಲಿಸಿದ್ದವು. ಕಪ್ಪತಗುಡ್ಡದ ಪರವಾಗಿ ಮುಖ್ಯಮಂತ್ರಿಗಳು ಇದ್ದರೆ ಕರ್ನಾಟಕದ ಜನರು ಅವರನ್ನು ಮುಂದುವರಿಸುತ್ತಾರೆ. ವಿರೋಧ ಮಾಡಿದರೆ ಏನು ಉತ್ತರ ಕೊಡಬೇಕೋ ಕೊಡುತ್ತಾರೆ.

ಕಪ್ಪತಗುಡ್ಡದ ಸುತ್ತಮುತ್ತಲೂ ನಡೆಯುತ್ತಿರುವ ಕಲ್ಲು ಗಣಿಗಾರಿಕೆ, ಮಣ್ಣು ಗಣಿಗಾರಿಕೆ, ಅಕ್ರಮ ಗಣಿಗಾರಿಕೆ ನಿಲ್ಲಿಸಬೇಕಿದೆ. ಅದಕ್ಕೆ ಮುಖ್ಯಮಂತ್ರಿ ಮನಸ್ಸು ಮಾಡಬೇಕಿದೆ. ಹಸುರು ಮನಸ್ಸಿನ ಡಿಎಫ್‌ಒಗಳು ಬರಬೇಕು. ಕಪ್ಪತಗುಡ್ಡದಲ್ಲಿ ಅಕ್ರಮ ಗಣಿಗಾರಿಕೆ ನಿಲ್ಲಬೇಕು. ಸಸ್ಯ ವೈವಿಧ್ಯ ಉಳಿಸಬೇಕು. ಇದೇ ನಿಜವಾದ ಪರಿಸರ ದಿನಾಚರಣೆ.

**-ಶಿವಕುಮಾರ ಸ್ವಾಮೀಜಿ**

ನಂದಿವೇರಿ ಮಠ

